ಕೊಡುವಂಥದ್ದಕ್ಕೆ ಯಾವುದೇ ರೀತಿಯಿಂದ ತೊಂದರೆ ಮಾಡುತ್ತಿಲ್ಲ. ಇವತ್ತು Rural feeder and urban feederಗೆ ಕೈಗಾರಿಕೆಗಳು 24 hours ವಿದ್ಯುತ್ ಕೊಡುತ್ತಿದ್ದೇವೆ. ಅದು ಗ್ರಾಮೀಣ ಪ್ರದೇಶದಲ್ಲಿರುವಂಥ ಅದೇ feeder ಮೇಲೆ ಬಂದರೆ ಅವರಿಗೆ ತೊಂದರೆಯಾಗಬಾರದು ಎನ್ನುವ ಸಲುವಾಗಿ ಎಲ್ಲಾ ಕೈಗಾರಿಕಾ ನಿವೇಶನಗಳಲ್ಲಿ separate feeder ಗಳನ್ನು ಕೊಡಿಸುವಂಥ ವ್ಯವಸ್ಥೆಯನ್ನು ಹಂತ ಹಂತವಾಗಿ ನಾವು ಮಾಡುತ್ತಿದ್ದೇವೆ. ಇದರಿಂದಾಗಿ ನಮಗೆ ಯಾವುದೇ ರೀತಿಯಿಂದ ತೊಂದರೆ ಬರುತ್ತಿಲ್ಲ ಎನ್ನುವ ಮಾತನ್ನು ಹೇಳುತ್ತೇವೆ. ನಾವು ತುಮಕೂರಿನ ವಸಂತನರಸಾಪುರದಲ್ಲಿ Industrial Area ಮಾಡಿದ್ದು ಈಗಾಗಲೇ ಹೇಮಾವತಿಯಿಂದ ನೀರು ಕೊಡುವಂಥ ಯೋಜನೆ ಅನುಷ್ಠಾನಗೊಳಿಸಿದ್ದು ಅಲ್ಲಿಗೆ pipe line ಹಾಕುತ್ತಿದ್ದೇವೆ. ಬರುವ ಮೂರು ತಿಂಗಳೊಳಗೆ ಆ Industrial Area ಗಳಿಗೆ ನೀರಿನ ಯಾವುದೇ ತೊಂದರೆ ಆಗದೆ ಹಾಗೆ ನಾವು ಮಾಡಿ ಕೊಡುತ್ತಿದ್ದೇವೆ.

ಶ್ರೀ ಎಂ.ಬಿ. ಪಾಟೀಲ್: ಮಾನ್ಯ ಬೃಹತ್ ಕೈಗಾರಿಕೆ ಸಚಿವರು, Industriesಗೆ ವಿದ್ಯುತ್ ಪೂರೈಕೆ ಮಾಡುತ್ತೇವೆಂದು ಹೇಳಿದರು. ಆದರೆ, ಕೃಷ್ಣಾ ಎರಡನೇ ಐತೀರ್ಪು ಬಂದಾದ ಮೇಲೆ 133 TMC ಯಷ್ಟು UKP basinನಲ್ಲಿ ನೀರಿನ ಹಂಚಿಕೆಯಾಗಿದೆ, against two schemes ಆಗಿದೆ. ಮುಳವಾಡ, ಚಿಮ್ಮಲಗಿ ಆಗಿದೆ.

ಅಧ್ಯಕ್ಷರು: Please, ವಿಷಯಾಂತರ ಮಾಡಬೇಡಿ. ನಾನು allow ಮಾಡುವುದಿಲ್ಲ.

ಶ್ರೀ ಮುರುಗೇಶ್ ರುದ್ರಪ್ಪ ನಿರಾಣಿ: ಅವರು ತಮ್ಮ ಪ್ರಶ್ನೆಯನ್ನು ಬೇರೆ ರೂಪದಲ್ಲಿ ಕೊಡಲಿ ನಾನು ಉತ್ತರ ಕೊಡುವುದಕ್ಕೆ ಸಿದ್ದನಿದ್ದೇನೆ.

ಅಧ್ಯಕ್ಷರು: ಆಯಿತು. ಈಶ್ವರ ಭೀಮಣ್ಣ ಖಂಡ್ರೆಯವರು. ಇಲ್ಲ. ಸುರೇಶ್ ಗೌಡರವರು. ಇಲ್ಲ. ತುಕರಾಂ ರವರು ತಾವು ಕೇಳಿ.

ಸಂಡೂರು ತಾಲ್ಲೂಕಿನ ಕೆರೆಗಳು

83 (567) ಶ್ರೀ ತುಕಾರಾಮ್ .ಇ (ಸಂಡೂರು) ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಡೂರ ತಾಲ್ಲೂಕಿನಲ್ಲಿ ಇರುವ ಕೆರೆಗಳ ಸಂಖ್ಯೆ ಎಷ್ಟು; (ವಿವರಗಳನ್ನು ಒದಗಿಸುವುದು)

ಆ) ಇತ್ತೀಚೆಗೆ 2010ರಲ್ಲಿ ಸುರಿದ ಅಕಾಲಿಕ ಮಳೆಯಿಂದ ಅಂಕಮನಾಳ ಕೆರೆ ಕಟ್ಟೆ ಒಡೆದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು):

ಅ) ಸಂಡೂರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 19 ಕೆರೆಗಳಿವೆ. ವಿವರಗಳನ್ನು ಅನುಬಂದದಲ್ಲಿ ನೀಡಲಾಗಿದೆ.

ಆ) ಅಂಕಮ್ಮನಾಳ ಕೆರೆ ಒಡೆದು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಕೆರೆ ಪ್ರದೇಶವನ್ನು ಈ ಕೆಳಕಂಡವರು ಪರಿವೀಕ್ಷಣೆ ಮಾಡಿರುತ್ತಾರೆ.

1. ಸಲಹೆಗಾರರು, ಆಣೆಕಟ್ಟು ಸುರಕ್ಷತಾ ಪರಿಶೀಲನಾ ತಂಡ.
2. ನಿರ್ದೇಶಕರು, ಅರ್ದನ್ ಡ್ಯಾಮ್ಸ್ ಸಿ.ಡಬ್ಲ್ಯೂಸಿ. ನವದೆಹಲಿ.
3. ಪರಿಣಿತ ಭೂಗರ್ಭ ಶಾಸ್ತ್ರಜ್ಞರು.

ಈ ಪರಿಣಿತರು ನೀಡಬಹುದಾದ ಸಲಹೆ ಹಾಗೂ ಸೂಚನೆಗಳನ್ನು ಅನುಸರಿಸಿ ಕೆರೆಯನ್ನು ಸುಸ್ಥಿತಿಯಲ್ಲಿಡಲು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಇ.ತುಕಾರಾಮ್: ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ನಾನು ಸಂಡೂರ ತಾಲ್ಲೂಕಿನಲ್ಲಿ ಒಟ್ಟು ಎಷ್ಟು ಕೆರೆಗಳಿವೆ ಎಂದು ಕೇಳಿದ್ದೆ. ಅದಕ್ಕೆ ಮಾನ್ಯ ಸಚಿವರು 19 ಕೆರೆಗಳಿವೆ ಎಂದು ಉತ್ತರಿಸಿದ್ದಾರೆ. ಅದರಲ್ಲೂ ಬಹುಮುಖ್ಯವಾದ ಅಂಕಮ್ಮನಾಳ ಕೆರೆ (ಸೀರಿಯಲ್ ನಂ:9) 2010 ರಲ್ಲಿ ಬಂದಂಥ ದೊಡ್ಡ ಮಳೆಗೆ ಆ ಕೆರೆ ಒಡೆದು ಹೋಗಿತ್ತು. ಅದನ್ನು ರಿಪೇರಿ ಮಾಡುವ ಬಗ್ಗೆ ನಾವು ಮನವಿ ಮಾಡಿದ್ದೇವು. ಆಗಸ್ಟ್‌ನಲ್ಲಿ ಮೂರು ಕೋಟಿ ಐವತ್ತು ಲಕ್ಷ ರೂಪಾಯಿ ಅಂದಾಜು ಪಟ್ಟಿಯನ್ನು Chief Engineer, Bijapurರವರಿಂದ ನೀರಾವರಿ ಇಲಾಖೆಗೆ ಬಂದಿದೆ. ನಾನು ಮನವಿ ಮಾಡುವುದು ಏನೆಂದರೆ, ಈ ಮೂರು ಕೋಟಿ ಐವತ್ತು ಲಕ್ಷ ರೂಪಾಯಿಗಳನ್ನು immediate ಆಗಿ ಮಂಜೂರು ಮಾಡಿ ಆ ಕೆರೆ ದುರಸ್ಥಿಗೊಳಿಸಬೇಕು. ಏಕೆಂದರೆ, ಈ ಕೆರೆ ಸುಮಾರು 400 ಎಕರೆಗೆ ನೀರುಣಿಸುತ್ತದೆ. ಇದರಿಂದ food production ಕಡಿಮೆಯಾಗುತ್ತದೆ. ಹೀಗಾಗಿ ನಾನು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುವುದಿಷ್ಟೆ. Immediate ಆಗಿ ಮೂರು ಕೋಟಿ ಐವತ್ತು ಲಕ್ಷ

ರೂಪಾಯಿಗಳನ್ನು sanction ಮಾಡಿ ಆ ಭಾಗದ ಜನರಿಗೆ ನೀರಾವರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಮನವಿ ಮಾಡುತ್ತಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, 2010 ರಲ್ಲಿ ಹೆಚ್ಚು ಮಳೆಯಾದಾಗ ಈ ಕರೆ ಒಡೆದು ಹೋಗಿರುವು ನಿಜ. ಆದರೆ, ಈಗಾಗಲೇ 13th Finance ನಲ್ಲಿ ಮೂರೂವರೆ ಕೋಟಿ ರೂಪಾಯಿಗಳನ್ನು ಮಂಜೂರು ಮಾಡುವುದಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಇದರ ಜೊತೆಯಲ್ಲಿ ಈ ಕೆರೆಯ bund height 16.2 Meter. ಬಹಳ ಎತ್ತರವಾದಂಥ ಕೆರೆ. ಈ ಕೆರೆಯನ್ನು ನಿರ್ದೇಶಕರು, ಅರ್ದನ್ ಡ್ಯಾಮ್ಸ್, ಸಿ.ಡಬ್ಲ್ಯೂ.ಸಿ. ದೆಹಲಿಯವರು ಮತ್ತು ಭೂಗರ್ಭ ಶಾಸ್ತ್ರಜ್ಞರು ಮತ್ತು ಆಣೆಕಟ್ಟು ಸುರಕ್ಷತಾ ತಂಡದವರು ಈಗಾಗಲೇ inspection ಮಾಡಿದ್ದಾರೆ. ಅವರ ವರದಿ ಬಂದ ತಕ್ಷಣ ಆದರ ದುರಸ್ತಿ ಕೆಲಸ ಪ್ರಾರಂಭ ಮಾಡುತ್ತೇವೆ.

ಶ್ರೀ ಇ.ತುಕಾರಾಮ್: ಈಗಾಗಲೇ ನಾನು ಮನವಿ ಮಾಡಿದ್ದೇನೆ. ದಯಮಾಡಿ ಆದಷ್ಟು ಬೇಗ ಇದನ್ನು sanction ಮಾಡಿ ಕೆರೆ ದುರಸ್ತಿ ಮಾಡಿಸಿ ಕೊಡಿ ಎಂದು ಮತ್ತೊಮ್ಮೆ ಕೇಳುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ: ಆದಷ್ಟು ಬೇಗ ಮಾಡಿಸಿ ಕೊಡುತ್ತೇವೆ.

ಅಧ್ಯಕ್ಷರು: ಮಾನ್ಯ ಸಿದ್ದು ಸವದಿಯವರೆ, ತಮ್ಮ ಪ್ರಶ್ನೆಗೆ ಉತ್ತರ ಒದಗಿಸಲು ಸಮಯ ಕೇಳಿದ್ದಾರೆ. ಮುಂದಿನ ವಾರ ಕೊಡಿಸುತ್ತೇನೆ.

ಹನಗೂಡು ಆಣೆಕ್ಟು ಮತ್ತು ಸರಪಳಿ ನಾಲೆಗಳು

85 (803) ಶ್ರೀ ಮಂಜುನಾಥ್ .ಹೆಚ್.ಪಿ (ಹುಣಸೂರು) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು ಹನಗೂಡು ಅಣೆಕಟ್ಟು ಮತ್ತು ಅದರ ಸರಪಳಿ ನಾಲೆಗಳ ಅಭಿವೃದ್ಧಿಗಾಗಿ 2011–12ನೇ ಸಾಲಿಗೆ ಅನುದಾನ ಮಂಜೂರಾತಿಗಾಗಿ ಸಲ್ಲಿಸಿರುವ ಪ್ರಸ್ತಾವನೆ ಸರ್ಕಾರಕ್ಕೆ ಬಂದಿರುವುದೇ;

ಆ) ಹಾಗಿದ್ದಲ್ಲಿ, ಪ್ರಸ್ತಾವನೆಯ ವಿವರ ಹಾಗೂ ಈ ಬಗ್ಗೆ ಸರ್ಕಾರದ ಕ್ರಮಗಳೇನು; (ವಿವರ ನೀಡುವುದು)

ಇ) ಹನಗೂಡು ಅಣೆಕಟ್ಟು ನಿರ್ಮಾಣಗೊಂಡು 500 ವರ್ಷಗಳಾಗಿದ್ದು, ಇದರ ಮುಖ್ಯ ನಾಲೆಗಳು ವಿತರಣಾ ಹಾಗೂ ಸರಪಳಿ ನಾಲೆಗಳು ಬಹಳ